144ನೇ ಅಧಿವೇಶನದಲ್ಲಿ ದಿ:-15/9/21 ರಂದು ಸದನದಲ್ಲಿ ಚರ್ಚೆಯಾಗಿದೆ ನಿ-72, ಕ್ರ-99

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಶಶೀಲ್ ಜಿ.ನಮೋಶಿ, ಶ್ರೀ ಅರುಣ ಶಹಾಪೂರ, ಶ್ರೀ ಕೆ.ಟಿ. ಶ್ರೀಕಂಠೇಗೌಡ ಹಾಗೂ ಇತರರುಗಳಿಂದ ನಿಯಮ 72 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

**ವಿಷಯ:-**

ವೃತ್ತಿ ಶಿಕ್ಷಣ (ಜೆಓಸಿ) ಇಲಾಖೆಯಲ್ಲಿ ಕಳೆದ 20,25 ವರ್ಷಗಳಿಂದ ಸೇವೆ ಸಲ್ಲಿಸಿದ ಶಿಕ್ಷಕರನ್ನು ದಿನಾಂಕ:6.4.2011 ರ ವಿಶೇಷ ವಿಧೇಯಕದನ್ವಯ ವಿವಿಧ ಇಲಾಖೆಗಳಲ್ಲಿ ವಿಲೀನಗೊಳಿಸಲಾಗಿದೆ. ಆದರೆ ವಿಧೇಯಕದಲ್ಲಿ ಖಾಯಂ ಪೂರ್ಣ ಸೇವೆಯನ್ನು ಪರಿಗಣಿಸಿರುವುದಿಲ್ಲ. ಇದರಿಂದ ಸದರಿ ಶಿಕ್ಷಕರಿಗೆ/ಸಿಬ್ಬಂದಿಗೆ ಯಾವುದೇ ನಿವೃತ್ತಿ ನಂತರ ಪಿಂಚಣಿ ದೊರೆಯುವುದಿಲ್ಲ. ಆದ್ದರಿಂದ, ವಿಧೇಯಕ ತಿದ್ದುಪಡಿ ಮಾಡಿ ನಿಶ್ಚಿತ ಪಿಂಚಣಿ ನೀಡುವಂತೆ ಹಾಗೂ ವಿಲೀನಗೊಂಡು ಬಾಕಿ ಇರುವ 11 ಜನ ಉಪನ್ಯಾಸಕರಿಗೆ ಹಾಗೂ 28 ಬೋಧಕೇತರ ಸಿಬ್ಬಂದಿಗೆ ಆದೇಶ ನೀಡಿರುವುದಿಲ್ಲ. ಇವರಿಗೆ ಆದೇಶ ನೀಡುವಂತೆ ಮತ್ತು ಪದವಿ ಪೂರ್ವ ಶಿಕ್ಷಣ ಸರ್ಕಾರಿ ಕಾಲೇಜುಗಳಲ್ಲಿ ವಿಲೀನಗೊಂಡ 90 ಉಪನ್ಯಾಸಕರಿಗೆ ಬಿ.ಎಡ್ ವಿನಾಯಿತಿ ನೀಡಿ ಖಾಯಂ ಪೂರ್ವ ಅವಧಿ ಘೋಷಣೆ ಮಾಡಿ ಸರ್ಕಾರಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಪ್ರಸ್ತಾಪಿಸಿರುವ ಕುರಿತು.

**ಉತ್ತರ:-**

**1)** ಕರ್ನಾಟಕ ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರುಗಳನ್ನು ವಿಲೀನಗೊಳಿಸುವ ಅಧಿನಿಯಮ ಸಂಖ್ಯೆ:ಸಂವ್ಯಶಾಇ 22 ಶಾಸನ 2011, ದಿನಾಂಕ:06.04.2011 ರಂದು ಜಾರಿಗೆ ಬಂದಿದ್ದು, ಈ ವಿಧೇಯಕದಲ್ಲಿ ವಿಧಿಸಿರುವ ಷರತ್ತುಗಳ ಆಧಾರದ ಮೇಲೆ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಉಪನ್ಯಾಸಕರನ್ನು ವಿಲೀನ ವಿಧೇಯಕದನ್ವಯ ದಿನಾಂಕ:06.04.2011ಕ್ಕೆ ನಿರಂತರವಾಗಿ 05 ವರ್ಷಗಳ ಸೇವೆ ಸಲ್ಲಿಸಿರುವ ನೌಕರರುಗಳನ್ನು ವಿವಿಧ ಇಲಾಖೆಗಳಲ್ಲಿ ವಿಲೀನಗೊಳಿಸಲಾಗಿದೆ. ವಿಲೀನಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನು ಕರ್ತವ್ಯಕ್ಕೆ ಹಾಜರಾದ ನಂತರ, ಈ ಅಧಿನಿಯಮದ ಅಡಿಯಲ್ಲಿ ಆತನ ಪ್ರಾರಂಭಿಕ ಮೂಲ ವೇತನವನ್ನು, ಆತನು ವಿಲೀನಗೊಂಡ ಹುದ್ದೆಯ ಪ್ರವರ್ಗದ ಕಾಲಿಕ ವೇತನ ಶ್ರೇಣಿಯ ಕನಿಷ್ಠಕ್ಕೆ ನಿಗಧಿಗೊಳಿಸತಕ್ಕದ್ದು ಹಾಗೂ ತನ್ನ ವಿಲೀನಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ಜೇಷ್ಠತೆ ಹಾಗೂ ರಜೆ ಅಥವಾ ಪಿಂಚಣಿಗೆ ಸಂಬಂಧಿಸಿದಂತೆ ಲೆಕ್ಕಕ್ಕೆ ತೆಗದುಕೊಳ್ಳತಕ್ಕದಲ್ಲ ಎಂಬ ಷರತ್ತನ್ನು ವಿಧೇಯಕದಲ್ಲಿ ವಿಧಿಸಲಾಗಿದೆ. ಅಲ್ಲದೆ, ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರುಗಳನ್ನು ವಿಲೀನಗೊಳಿಸುವ ಅಧಿನಿಯಮ

2011ರ ನಿಯಮ-3ರಲ್ಲಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರುಗಳನ್ನು ಒಂದು ಸಲದ ಕ್ರಮವಾಗಿ ವಿಲೀನಗೊಳಿಸಲು ಪರಿಗಣಿಸಿರುವುದರಿಂದ ಹಾಗೂ ಖಾಯಂ ಪೂರ್ವ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಪರಿಗಣಿಸದಿರುವುದರಿಂದ ಖಾಯಂಪೂರ್ವ ಸೇವೆಯನ್ನು ಪರಿಗಣಿಸಿ, ಪಿಂಚಣಿ ನೀಡಲು ಅವಕಾಶವಿರುವುದಿಲ್ಲ.

**2)** ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 22 ಶಾಸನ 2011, ದಿನಾಂಕ:6.4.2011ರ ವಿಧೇಯಕದನ್ವಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಯಲ್ಲಿ ವಿಲೀನಗೊಳಿಸಲು ಅಧಿನಿಯಮದ ನಿಯಮ 3 (1) (ಬಿ) ಯಾವೊಬ್ಬ ಅರೆಕಾಲಿಕ ವೃತ್ತಿ ಆಧರಿತ ಕೋರ್ಸುಗಳ ನೌಕರನನ್ನು ಸಂಬಂಧಿಸಿದ ನೇಮಕಾತಿಯ ಸೂಕ್ತ ನಿಯಮಗಳಡಿಯಲ್ಲಿ ಆ ಹುದ್ದೆಗಾಗಿ ನಿಯಮಿಸಲಾದ ವಿದ್ಯಾರ್ಹತೆಯನ್ನು ತನ್ನ ವಿಲೀನದ ದಿನಾಂಕದಂದು ಆತನು ಹೊಂದಿರದ ಹೊರತು ವಿಲೀನಗೊಳಿಸತಕ್ಕದ್ದಲ್ಲವೆಂದು ತಿಳಿಸಲಾಗಿದೆ. ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) (ತಿದ್ದುಪಡಿ) ನಿಯಮಗಳು 2007 ರಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 145 ಡಿಜಿಓ 2007, ದಿನಾಂಕ:04.02.2008ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ಸ್ನಾತಕೋತ್ತರ ಪದವಿಯಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಬೇಕು ಮತ್ತು ಬಿ.ಇಡಿ ಪದವಿ ಹೊಂದಿರಬೇಕು ಎಂದು ನಿಗದಿಪಡಿಸಲಾಗಿದೆ. ಆದರೂ, ಮುಂದಿನ 04 ವರ್ಷಗಳವರೆಗೆ ಬಿ.ಇಡಿ ಪದವಿ ಹೊಂದದವರನ್ನೂ ಸಹ ಮುಂದೆ ಅವರ ಸ್ವಂತ ಖರ್ಚಿನಲ್ಲಿ 04 ವರ್ಷದೊಳಗಾಗಿ ಬಿ.ಇಡಿ ಪದವಿಯನ್ನು ತೇರ್ಗಡೆ ಹೊಂದಬೇಕು ಎಂಬ ಷರತ್ತಿಗೆ ಒಳಪಟ್ಟು ನೇಮಿಸಬಹುದು ಎಂಬ ಅವಕಾಶ ಕಲ್ಪಿಸಲಾಗಿದೆ. ಈ ಅವಕಾಶದಂತೆ ಲಭ್ಯವಿದ್ದ ಹುದ್ದೆಗಳಿಗೆ ಎದುರಾಗಿ ದಿನಾಂಕ:10.05.2016ರವರೆಗೆ ಒಟ್ಟು 133 ಉಪನ್ಯಾಸಕರನ್ನು ಷರತ್ತಿಗೆ ಒಳಪಡಿಸಿ ವಿಲೀನಗೊಳಿಸಲಾಗಿದೆ. ವಿಲೀನಗೊಳಿಸಲಾಗದ 11 ಉಪನ್ಯಾಸಕರಿಗೆ ಅಗತ್ಯ ಹುದ್ದೆಗಳು ಮೇಲೆ ತಿಳಿಸಿದ ಅವಕಾಶ ಮುಗಿದ ನಂತರ ಲಭ್ಯವಾದುದ್ದರಿಂದ, ನೇಮಕಾತಿ ನಿಯಮಗಳು, ವಿಲೀನ ವಿಧೇಯಕ ಮತ್ತು ಎನ್.ಸಿ.ಟಿ.ಇ ನಿಯಮಗಳಂತೆ ಈ 11 ಉಪನ್ಯಾಸಕರುಗಳು ಬಿ.ಇಡಿ ಪದವಿ ಪಡೆಯುವುದು ಕಡ್ಡಾಯವಾಗಿರುವುದರಿಂದ, ಈ 11 ಉಪನ್ಯಾಸಕರುಗಳು ಬಿ.ಇಡಿ ಪದವಿಯನ್ನು ಪಡೆಯದೇ ಇರುವುದರಿಂದ, ಸದರಿಯವರುಗಳನ್ನು ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

**3)** ವಿಲೀನ ವಿಧೇಯಕ-2011ರನ್ವಯ ವಿಲೀನಗೊಳ್ಳದೆ ಬಾಕಿ ಇರುವ 89 ವೃತ್ತಿ ಶಿಕ್ಷಣ ಸಿಬ್ಬಂದಿಯವರು ದಿನಾಂಕ:13.08.2018ರಂದು ಪದವಿ ಪೂರ್ವ ಶಿಕ್ಷಣ ಇಲಾಖೆಯವರು ನಡೆಸಿದ ಕೌನ್ಸಿಲಿಂಗ್ ನಲ್ಲಿ ಪ್ರ.ದ.ಸ ಹಾಗೂ ದ್ವಿ.ದ.ಸ ಹುದ್ದೆಗಳನ್ನು ಆಯ್ಕೆ ಮಾಡಿಕೊಂಡಿದ್ದು, ಸದರಿಯವರಿಗೆ ಸ್ಥಳನಿಯುಕ್ತಿಗೊಳಿಸಿದ 89 ಸಿಬ್ಬಂದಿಯವರಲ್ಲಿ 61 ಸಿಬ್ಬಂದಿಯವರನ್ನು ಮಾತ್ರ ಕರ್ತವ್ಯಕ್ಕೆ ಹಾಜರುಪಡಿಸಿಕೊಂಡಿದ್ದು, ಉಳಿದ 28 ವೃತ್ತಿ

ಶಿಕ್ಷಣ ಸಿಬ್ಬಂದಿಯವರನ್ನು ಅನುದಾನಿತ ಖಾಸಗಿ ಆಡಳಿತ ಮಂಡಳಿಯವರು ಕರ್ತವ್ಯಕ್ಕೆ ಹಾಜರುಪಡಿಸಿಕೊಂಡಿರುವುದಿಲ್ಲ. ಈ ಕಾರಣದಿಂದಾಗಿ ಬಾಕಿ ಉಳಿದ 28 ಸಿಬ್ಬಂದಿಯವರನ್ನು ವಿಲೀನಗೊಳಿಸುವ ಬಗ್ಗೆ ನಿಯಮಾನುಸಾರ ಕೌನ್ಸಲಿಂಗ್ ನಡೆಸಲು ದಿನಾಂಕ:28.07.2021ರ ಸರ್ಕಾರದ ಪತ್ರ ಸಂಖ್ಯೆ: ಇಡಿ 29 ಟಿವಿಇ 2021ರಲ್ಲಿ ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ ಇವರಿಗೆ ಈಗಾಗಲೇ ಅನುಮತಿ ನೀಡಲಾಗಿದೆ. ಅದರಂತೆ, ಈ 28 ವೃತ್ತಿ ಶಿಕ್ಷಣ ಸಿಬ್ಬಂದಿಯವರನ್ನು ವಿಲೀನಗೊಳಿಸಲು ಕ್ರಮ ವಹಿಸಲಾಗುತ್ತಿದೆ.

**4)** ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) (ತಿದ್ದುಪಡಿ) ನಿಯಮಗಳು 2007 ರಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 145 ಡಿಜಿಓ 2007, ದಿನಾಂಕ:04.02.2008ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ಸ್ನಾತಕೋತ್ತರ ಪದವಿಯಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಬೇಕು ಮತ್ತು ಬಿ.ಇಡಿ ಪದವಿ ಹೊಂದಿರಬೇಕು ಎಂದು ನಿಗದಿಪಡಿಸಲಾಗಿದೆ. ಆದರೂ, ಮುಂದಿನ 04 ವರ್ಷಗಳವರೆಗೆ ಬಿ.ಇಡಿ ಪದವಿ ಹೊಂದದವರನ್ನೂ ಸಹ ಮುಂದೆ ಅವರ ಸ್ವಂತ ಖರ್ಚಿನಲ್ಲಿ 04 ವರ್ಷದೊಳಗಾಗಿ ಬಿ.ಇಡಿ ಪದವಿಯನ್ನು ತೇರ್ಗಡೆ ಹೊಂದಬೇಕು ಎಂಬ ಷರತ್ತಿಗೆ ಒಳಪಟ್ಟು ನೇಮಿಸಬಹುದು ಎಂಬ ಅವಕಾಶ ಕಲ್ಪಿಸಲಾಗಿದೆ. ವೃಂದ ಮತ್ತು ನೇಮಕಾತಿ, ವಿಲೀನ ವಿಧೇಯಕ ಮತ್ತು ಎನ್.ಸಿ.ಟಿ.ಇ ನಿಯಮಗಳಂತೆ, ಉಪನ್ಯಾಸಕರುಗಳು ಬಿ.ಇಡಿ ಪದವಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರುಗಳನ್ನು ವಿಲೀನಗೊಳಿಸುವ ಅಧಿನಿಯಮ, 2011ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 22 ಶಾಸನ 2011, ದಿನಾಂಕ:06.04.2011 ರನ್ವಯ ಸರ್ಕಾರದ ಆದೇಶ ಸಂಖ್ಯೆ: ಇಡಿ 93 ಟಿವಿಇ 2012, ದಿನಾಂಕ:27.12.2012ರಲ್ಲಿ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ಉಪನ್ಯಾಸಕರುಗಳಾಗಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಅಭ್ಯರ್ಥಿಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರುಗಳ ಹುದ್ದೆಗೆ ವಿಲೀನಗೊಳಿಸಲು ಆದೇಶಿಸಿದೆ. ಸದರಿ ಆದೇಶದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಬಿ.ಇಡಿ ಪದವಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಿಗಧಿತ ಅವಧಿಯಲ್ಲಿ ಪಡೆಯತಕ್ಕದ್ದು, ನಿಗಧಿತ ಅವಧಿಯಲ್ಲಿ ಬಿ.ಇಡಿ ಪದವಿಯನ್ನು ಹೊಂದದೆ ಇದ್ದಲ್ಲಿ, ಸೇವೆಯಿಂದ ವಿಮುಕ್ತಿಗೊಳಿಸಲಾಗುವುದೆಂದು ತಿಳಿಸಲಾಗಿದೆ. ನಂತರ, ಸುತ್ತೋಲೆ ಸಂಖ್ಯೆ: ಇಡಿ 78 ಟಿವಿಇ 2014, ದಿನಾಂಕ:18.07.2017ರಲ್ಲಿ ವಿಲೀನ ವಿಧೇಯಕದನ್ವಯ ಕೆ.ಸಿ.ಎಸ್. (ಪರಿವೀಕ್ಷಣಾ) ನಿಯಮಗಳು 1977 ವಿಲೀನಗೊಂಡ ನೌಕರರಿಗೂ ಅನ್ವಯವಾಗುತ್ತದೆ ಎಂದು ತಿಳಿಸುತ್ತಾ, 04 ವರ್ಷದೊಳಗಾಗಿ ತಮ್ಮ ಸ್ವಂತ

ಖರ್ಚಿನಲ್ಲಿ ಬಿ.ಇಡಿ ಪದವಿ ಹೊಂದಬೇಕು ಎಂಬ ಷರತ್ತನ್ನು ವಿಧಿಸಲಾಗಿ, ಸದರಿ ಷರತ್ತನ್ನು ಪೂರೈಸದಿದ್ದಲ್ಲಿ ಸೇವೆಯಿಂದ ವಿಮುಕ್ತಿಗೊಳಿಸಲು ನಿಯಮಾನುಸಾರ ಕ್ರಮಕೈಗೊಳ್ಳುವುದಾಗಿ ಸೂಚಿಸಲಾಗಿದೆ.

ಕೇಂದ್ರ ಸರ್ಕಾರದ ನಿಯಮಗಳಾದ National Council for Teacher Education (Recognition, norms and procedure) Regulations-2014 ರ ಅಪೆಂಡಿಕ್ಸ್-14ರನ್ವಯ ತರಗತಿ 06 ರಿಂದ 08, 09 ರಿಂದ 10 ಹಾಗೂ 11 ರಿಂದ 12ರವರೆಗೆ ಉಪನ್ಯಾಸ ನೀಡಲು ಬಿ.ಇಡಿ ಪದವಿ ಹೊಂದಿರಬೇಕೆಂದು ಉಪಬಂಧ ಕಲ್ಪಿಸಲಾಗಿದೆ. ಬಿ.ಇಡಿ ಪದವಿ ಹೊಂದುವ ಷರತ್ತಿನಿಂದ ವಿನಾಯಿತಿ ನೀಡುವ ಪ್ರಸ್ತಾವನೆಯು ಸದರಿ ನಿಯಮಗಳ ಉಪಬಂಧಗಳಿಗೆ ವ್ಯತಿರಿಕ್ತವಾಗುತ್ತವೆ. NCTE ನಿಯಮಗಳನ್ವಯ ಮತ್ತು Right to Education Act ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ, ವಿಲೀನ ವಿಧೇಯಕದನ್ವಯ ಬಿ.ಇಡಿ ಪದವಿ ಹೊಂದುವ ಷರತ್ತಿನಿಂದ ವಿನಾಯಿತಿ ನೀಡಲು ಅವಕಾಶವಿಲ್ಲ ಹಾಗೂ ಬಿ.ಇಡಿ ವಿದ್ಯಾರ್ಹತೆಯನ್ನು ನಿಗಧಿಪಡಿಸುವುದು ರಾಜ್ಯ ಸರ್ಕಾರದ ನಿಯಮಗಳಡಿ ಬರುವುದಿಲ್ಲ. ಬಿ.ಇಡಿ ವಿದ್ಯಾರ್ಹತೆಯನ್ನು ನಿಗಧಿಪಡಿಸುವುದು ಕೇಂದ್ರದ ನಿಯಮಗಳಡಿ ಬರುತ್ತದೆ. ಆದಾಗ್ಯೂ, ಬಿ.ಇಡಿ ವಿದ್ಯಾರ್ಹತೆಯನ್ನು ಹೊಂದುವ ಷರತ್ತಿಯಿಂದ ವಿನಾಯಿತಿ ನೀಡಿದರೆ, ಇದು ಕೇಂದ್ರದ ನಿಯಮಗಳಿಗೆ ವ್ಯತಿರಿಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ, National Council for Teacher Education (Recognition, norms and procedure) Regulations-2014ರ ನಿಯಮಗಳನ್ನು ಪಾಲಿಸುವುದು ರಾಜ್ಯ ಸರ್ಕಾರಕ್ಕೆ ಕಡ್ಡಾಯವಾಗಿರುತ್ತದೆ. ಆದ್ದರಿಂದ, ಬಿ.ಇಡಿ ಪದವಿಯನ್ನು ಕಡ್ಡಾಯಗೊಳಿಸಿರುವುದನ್ನು ತೆರವುಗೊಳಿಸುವುದಕ್ಕೆ ಅವಕಾಶವಿರುವುದಿಲ್ಲ.

ಮಾನ್ಯ ಸುಪ್ರೀಂಕೋರ್ಟ್ ನ್ಯಾಯಾಲಯದ ಅಪೀಲು (ಸಿವಿಲ್) 3595-3612 of 1999 ದಿನಾಂಕ:10.04.2006ರ ರಾಜ್ಯ ಸರ್ಕಾರ ಮತ್ತು ಇತರರು ವಿರುದ್ಧ ಉಮಾದೇವಿ ಮತ್ತು ಇತರರು ಪ್ರಕರಣದಲ್ಲಿ ಒಂದು ಬಾರಿ ಕ್ರಮವಾಗಿ ಕ್ರಮಬದ್ಧಗೊಳಿಸಲು ಅವಕಾಶ ನೀಡಿ ಆದೇಶಿಸಿದ್ದು, ಕ್ರಮಬದ್ಧಗೊಳಿಸುವಿಕೆಯನ್ನು ಪುನರಾವರ್ತಿಯಾಗಿ ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸಿರುವುದರಿಂದ, ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ವಿಧೇಯಕ-2011ನ್ನು ಮತ್ತೆ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

**ಸಂಖ್ಯೆ:ಇಪಿ 23 ಟಿವಿಇ 2021**

(ಬಿ.ಸಿ.ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಹಾಗೂ ಸಕಾಲ ಸಚಿವರು